**ಓ ಎಸ್ ನಂಃ 21-2013** **ಡಿ ಡಬ್ಲ್ಯೂ - 2**

**ಸಾಕ್ಷಿಯನ್ನು ದಿನಾಂಕಃ 12.01.2024 ರಂದು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀಸವಾಲುಃ** ವಾದಿಗಳ ಪರ ಶ್ರೀ ಬಿ ಎಸ್ ಕೆ ವಕೀಲರಿಂದ

ನಾನು 4 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. 1 ನೇ ಪ್ರತಿವಾದಿ ತನ್ನ ಪರವಾಗಿ ಸಾಕ್ಷ್ಯ ನುಡಿಯಲು ಕೇಳಿಕೊಂಡ ಮೇರೆಗೆ ನಾನು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿ. ನನ್ನ ಮುಖ್ಯವಿಚಾರಣೆಯ ಪ್ರಮಾಣಪತ್ರಕ್ಕೆ ಮಾಹಿತಿಯನ್ನು 1 ನೇ ಪ್ರತಿವಾದಿ ಕೊಟ್ಟಿರುತ್ತಾರೆ ಅಂದರೆ ಸರಿ. ಸಾಕ್ಷಿ ಮುಂದುವರೆದು ಖರೀದಿ ವ್ಯವಹಾರದ ಬಗ್ಗೆ ತನಗೂ ಸಹ ಗೊತ್ತು ಎಂದು ನುಡಿಯುತ್ತಾರೆ. ನಾನು ಮತ್ತು 1 ನೇ ಪ್ರತಿವಾದಿ ಸ್ನೇಹಿತರು ಮತ್ತು ಒಂದೇ ಗ್ರಾಮಸ್ಥರು ಅಂದರೆ ಸರಿ. 1 ನೇ ಪ್ರತಿವಾದಿ ಹಿರಿತನ ಮಾಡುವ ವ್ಯಕ್ತಿ ಅಂದರೆ ಸರಿ. ಅವರಿಗೆ ಗ್ರಾಮದಲ್ಲಿ ಗೌರವಿದೆ ಅಂದರೆ ಸರಿ. ನಾನು ಯಾವುದೇ ಕಾಲದಲ್ಲಿಯಾ ಅವರ ಮಾತಿಗೆ ವಿರುದ್ಧವಾಗಿ ನಡೆದುಕೊಂಡಿಲ್ಲ ಎಂದರೆ ಸಾಕ್ಷಿಯು ವಿಚಾರ ಸತ್ಯವಾಗಿದ್ದರೇ ಮಾತ್ರ ನಡೆದುಕೊಳ್ಳುವುದಾಗಿ ನುಡಿಯುತ್ತಾರೆ.

ವಾದಿಯ ಹೆಸರು ಬಸನಗೌಡ ಪಾಟೀಲ. ಆತನ ಹೆಂಡತಿ ಮತ್ತು ಮಕ್ಕಳು ಹೆಸರು ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಸದರಿಯವರು ಸುಮಾರು ವರುಷಗಳ ಹಿಂದೆಯೇ ಹುಲಗಿನಕಟ್ಟಿ ಗ್ರಾಮಕ್ಕೆ ಅಂದರೆ ಅವರ ತವರು ಮನೆಗೆ ಹೋಗಿದ್ದರಿಂದ ನೆನಪಿಲ್ಲ ಎಂದು ನುಡಿಯುತ್ತಾರೆ. ಸಂಚಗಾರ ಪತ್ರ ಆದಾಗ ಬಸನಗೌಡ ಪಾಟೀಲರವರ ಮಕ್ಕಳಿಗೆ ಸುಮಾರು 10 ವರುಷಗಳಾಗಿರಬಹುದು. ದಾವಾ ಆಸ್ತಿಯ ವಿಸ್ತೀರ್ಣ 2 ಎಕರೆ ಇದೆ. ಸಾಕ್ಷಿ ಮುಂದುವರೆದು ಮೊದಲಿಗೆ ಒಟ್ಟು 8 ಎಕರೆ ಇತ್ತು ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಸ.ನಂ. ಮತ್ತು ಚೆಕ್ಕುಬಂದಿ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ತನ್ನ ಆಸ್ತಿ ಸ.ನಂ.66 ದಾವಾ ಆಸ್ತಿಯ ಪಕ್ಕದಲ್ಲಿದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಪಹಣಿಯನ್ನು ನಾನು ನೋಡಿಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ ಸಂಚಗಾರ ಪತ್ರ ಹೊರತುಪಡಿಸಿ ಬೇರೆ ವ್ಯವಹಾರ ಆಗಿರುವ ಬಗ್ಗೆ ನನಗೆ ಗೊತ್ತಿಲ್ಲ. ಬಸನಗೌಡ ಪಾಟೀಲರವರು ಯಾವ ಸ್ಥಳದಲ್ಲಿ ಮರಣ ಹೊಂದಿದರು ಎಂದು ನನಗೆ ಗೊತ್ತಿಲ್ಲ. ತುಮರಿಕೊಪ್ಪ ಗ್ರಾಮದಲ್ಲಿ ಮಳೆ ಬೆಳೆ ಚೆನ್ನಾಗಿ ಆಗುತ್ತದೆ ಎಂದರೆ ಕೆಲವೊಂದು ವರುಷಗಳಲ್ಲಿ ಆಗುತ್ತದೆ ಮತ್ತು ಕೆಲವೊಂದು ವರುಷಗಳಲ್ಲಿ ಆಗುವುದಿಲ್ಲ ಎಂದು ನುಡಿಯುತ್ತಾರೆ. ಸಂಚಗಾರ ಪತ್ರ ಆಗುವ ಕಾಲಕ್ಕೆ ವಾದಿಯ ಗಂಡನಿಗೆ ದಾವ ಆಸ್ತಿ ಬಿಟ್ಟು 6 ಎಕರೆ ಜಮೀನು ಇತ್ತು ಅಂದರೆ ಸರಿ. ಸದರಿ 6 ಎಕರೆಯಲ್ಲಿಯೂ ಸಹ ಒಳ್ಳೆಯ ಉತ್ಪನ್ನ ಬರುತ್ತಿತ್ತು ಅಂದರೆ ಸರಿಯಲ್ಲ.

ಬಸನಗೌಡ ಪಾಟೀಲರವರಿಗೆ ಮನೆತನದ ಅಡಚಣೆ ಇರಲಿಲ್ಲ ಅಂದರೆ ಸರಿ. ಸಾಕ್ಷಿ ಮುಂದುವರೆದು ಮನೆ ಬೀಳುವ ಸ್ಥಿತಿಯಲ್ಲಿ ಇತ್ತು ಎಂದು ನುಡಿಯುತ್ತಾರೆ. ಸಂಚಗಾರ ಪತ್ರ ಆದ ದಿನಾಂಕ ನೆನಪಿಲ್ಲ. ಸಂಚಗಾರ ಪತ್ರ ಎಷ್ಟು ರೂ.ಗಳ ಬಾಂಡ ಪೇಪರ ಮೇಲೆ ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಬಾಂಡ ಪೇಪರನ್ನು ಬಸನಗೌಡ ಪಾಟೀಲರವರು ಬರೆದಿದ್ದಾರೇ ಎಂದು ನುಡಿಯುತ್ತಾರೆ. ಸಂಚಗಾರ ಪತ್ರವನ್ನು ನ್ಯಾಯಾಲಯದ ಎದುರುಗಡೆ ಇರುವ ತಹಶೀಲ್ದಾರವರ ಕಚೇರಿ ಆವರಣದಲ್ಲಿರುವ ಸ್ಟಾಂಪ ವೆಂಡರ ಬಳಿ ಬರೆಯಲಾಯಿತು. ನಿಡಿ14 ರಲ್ಲಿ ನನ್ನ ಸಹಿ ಇಲ್ಲ. ಸಂಚಗಾರ ಹಣ ಒಟ್ಟು 52,000/- ಹಣವನ್ನು 3 ಕಂತುಗಳ ಮುಖಾಂತರ ಕೊಟ್ಟರು. ಹಣ ಕೊಟ್ಟಿರುವುದಕ್ಕೆ ಬಸನಗೌಡ ಪಾಟೀಲರವರು ರುಜು ಮಾಡಿದ್ದರು. ನಿಪಿ15 ರಲ್ಲಿ ನನ್ನ ಸಹಿ ಇಲ್ಲ ಅಂದರೆ ಸರಿ. ಹಣ ಕೊಟ್ಟ ವಿಚಾರವನ್ನು ಬಾಂಡ ಪೇಪರ ಮೇಲೆ ಸಹಿ ಮಾಡಿಸಿಕೊಂಡಿದ್ದರೋ ಎಂದರೆ ಸಾಕ್ಷಿಯು ತಾನು ಒಂದು ಸಹಿ ಮಾಡಿರುವುದಾಗಿ ನುಡಿಯುತ್ತಾರೆ. ಪೂರ್ಣ ಹಣ ಸ್ವೀಕರಿಸಿದ ನಂತರ ಆದಂತಹ ಖರೀದಿ ವ್ಯವಹಾರಕ್ಕೆ ನಾನು ಒಂದು ಸಹಿ ಮಾಡಿದ್ದೇನೆ.

1 ನೇ ಪ್ರತಿವಾದಿಗೆ ಸಹಾಯ ಮಾಡುವ ಉದ್ದೇಶದಿಂದ ನಿಡಿ14 ನ್ನು ಸೃಷ್ಟಿ ಮಾಡಿದ್ದೇವೆ ಅಂದರೆ ಸರಿಯಲ್ಲ. ಬಸನಗೌಡ ಪಾಟೀಲರವರು ಮದ್ಯವ್ಯಸನಿಯಾಗಿದ್ದರಿಂದ ಸದರಿ ಸಂದರ್ಭದ ಲಾಭ ಪಡೆಯುವ ಉದ್ದೇಶದಿಂದ ಮತ್ತು ವಾದಿಗಳಿಗೆ ಮೋಸ ಮಾಡುವ ಉದ್ದೇಶದಿಂದ 1 ನೇ ಪ್ರತಿವಾದಿಯು ಸೃಷ್ಟಿ ಮಾಡಿದ ನಿಡಿ14 ಕ್ಕೆ ನಾನು ರುಜು ಮಾಡಿದ್ದೆ ಅಂದರೆ ಸರಿಯಲ್ಲ. ನನಗೆ ಪ್ರಕರಣದ ಬಗ್ಗೆ ಮಾಹಿತಿ ಇಲ್ಲದೇ ಇದ್ದರೂ ಸಹ 1 ನೇ ಪ್ರತಿವಾದಿಗೆ ಸಹಾಯ ಮಾಡುವ ಎಕೈಕ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೆ ಸರಿ ಇದೆ,**

**ದಿವಾಣಿ ನ್ಯಾಯಾಧೀಶರು ಹಾಗೂ**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ.**